<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ಯವರ ನ್ಯಾಯಾಲಯ, ಪೊನ್ನಂಪೇಟೆ, ಕೊಡಗು ಜಿಲ್ಲೆ.</u>

<u>ಕ್ರಿಮಿನಲ್ ಮೊ. ಸಂ.73/2016.</u>

ಪ್ರಾ. ಸಾ. ಃ-1

ಚಾ. ಸಾ. B-1

| | | |
|---|---|---|
| ಹೆಸರು | ಃ- | ಸುಬ್ರಮಣ್ಯ ಜಿ ಕೆ |
| ತಂದೆಯ ಹೆಸರು | ಃ- | ಕೃಷ್ಣೇಗೌಡ |
| ವಯಸ್ಸು | ಃ- | 43 ವರ್ಷ |
| ಉದ್ಯೋಗ | ಃ- | ಪಿ ಎಸ್ ಐ, ಸಿದ್ದಾಪುರ ಪೊ.ಠಾಣೆ. |
| ವಾಸಸ್ಥಳ | ಃ- | ಸಿದ್ದಾಪುರ |

ಪ್ರಮಾಣೀಕರಿಸಲಾದ ದಿನಾಂಕ **:**-14-02-2018.

ಮುಖ್ಯ ವಿಚಾರಣೆ **:**- ಮಾನ್ಯ ಸ. ಸ. ಅ. ರವರಿಂದ ಃ-

ನಾನು 2015 ರಿಂದ 2017 ರ ತನಕ ವಿರಾಜಪೇಟೆ ನಗರ ಠಾಣೆಯಲ್ಲಿ ಪಿ ಎಸ್ ಐ ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ11.7.2015ರಂದು ಸಮಯ 21ಃ15ಗಂಟೆಯಲ್ಲಿ ನಾನು ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ, ಗೋಣಿಕೊಪ್ಪ ಕಡೆಯಿಂದ ಕೆಎ02ಡಿ9238 ಟೆಂಪೊಟ್ರಾವಲ್ಸ್ ವಾಹನದಲ್ಲಿ ಯಾವುದೇ ಇಲಾಖಾ ರಹದಾರಿ ಇಲ್ಲದೆ ಬೀಟೆ ಮರದ ನಾಟಗಳನ್ನು ತುಂಬಿಕೊಂಡು ಅಕ್ರಮವಾಗಿ ಸಾಗಿಸುವ ಉದ್ದೇಶದಿಂದ ವಿರಾಜಪೇಟೆ ಕಾವೇರಿ ಕಾಲೇಜು ಬಸ್ಸು ನಿಲ್ದಾಣದ ಬಳಿ ನಿಲ್ಲಿಸಿರುವುದಾಗಿದೆ ಎಂಬುದಾಗಿ ಬಂದ ಖಚಿತ ವರ್ತಮಾನದ ಮೇರೆಗೆ ದಾಳಿ ಮಾಡುವ ಸಲುವಾಗಿ ಠಾಣೆಯಲ್ಲಿ ಇದ್ದ ಪಿಸಿ125 ಮಂಜುನಾಥ್‌ರವರಿಗೆ ಇಬ್ಬರು ಪಂಚರನ್ನು ಕರೆದುಕೊಂಡು ಬರುವಂತೆ ಹೇಳಿ ಕಳುಹಿಸಿರುತ್ತೇನೆ.

ಹಾಗೂ ಬಂದಿದ್ದ ಮಾಹಿತಿಯ ಮೇರೆಗೆ ಸರ್ಕಾರದ ಪರವಾಗಿ ಸ್ವ-ವರದಿಯನ್ನು ತಯಾರು ಮಾಡಿ ನಮ್ಮ ಠಾಣಾ ಮೊ.ಸಂ.50ಃ2015ರಂತೆ ಪ್ರಕರಣವನ್ನು ದಾಖಲು ಮಾಡಿಕೊಂಡು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಸಿಬ್ಬಂದಿಯು ಗಣೇಶ್ ಮತ್ತು ದಿನೇಶ್ ಎಂಬ ಪಂಚರನ್ನು ಠಾಣೆಗೆ ಕರೆದುಕೊಂಡು ಬಂದ ಮೇರೆಗೆ ಸದರಿ ಪಂಚರಿಗೆ ಹಾಗೂ ನಮ್ಮ ಸಿಬ್ಬಂದಿಗಳಿಗೆ ಬಂದಿದ್ದ ವರ್ತಮಾನದ ಬಗ್ಗೆ ತಿಳಿಸಿರುತ್ತೇನೆ. ನಂತರ ನಾವು ಇಲಾಖಾ ಜೀಪ್‌ನಲ್ಲಿ ಸು.10 ಗಂಟೆಯ ಸಮಯದಲ್ಲಿ ಠಾಣೆಯಿಂದ ದಾಳಿಗೆ ಹೊರಟು ಕಾವೇರಿ ಕಾಲೇಜ್‌ನ ಬಳಿಗೆ ಸು.10ಃ10ರ ಸಮಯಕ್ಕೆ ತಲುಪಿರುತ್ತೇವೆ. ಸದರಿ ಕಾಲೇಜ್‌ನ ಬಳಿಯಲ್ಲಿ ಒಂದು ಟೆಂಪೋ-ಟ್ರಾವಲ್ಸ್ ವಾಹನ ನಿಂತಿದ್ದನ್ನು ಕಂಡು ಸದರಿ ವಾಹನದ ಪಕ್ಕ ನಮ್ಮ ಜೀಪ್‌ನ್ನು ನಿಲ್ಲಿಸಿರುತ್ತೇವೆ, ಆ ವೇಳೆಯಲ್ಲಿ ಸದರಿ ಟ್ರಾವಲ್ಸ್ ವಾಹನದಿಂದ ಮೂರು ಜನರು ಇಳಿದು ತಪ್ಪಿಸಿಕೊಳ್ಳಲು ಪ್ರಯತ್ನಪಟ್ಟಿರುತ್ತಾರೆ, ಆಗ ಇಲಾಖಾ ಸಿಬ್ಬಂದಿಗಳು ಅವರನ್ನು ಸುತ್ತುವರಿದು ಹಿಡಿದಿರುತ್ತೇವೆ.

ನಂತರ ಆರೋಪಿತರನ್ನು ವಿಚಾರಿಸಿದಾಗ ಅವರು ಮೊಹಮ್ಮದ್-ವಾಸಿಮ್, ಮೋಹಿನುದ್ದೀನ್ ಮತ್ತು ಇಮ್ರಾನ್-ಖಾನ್ ಎಂದು ತಿಳಿದುಬಂದಿರುತ್ತದೆ. ನಂತರ ಪಂಚರ ಸಮಕ್ಷಮದಲ್ಲಿ ಸದರಿ ಟೆ.ಟ್ರಾವಲ್ಸ್ ವಾಹನವನ್ನು ಪರಿಶೀಲನೆ ಮಾಡಿದಾಗ ಬೀಟೆ ಮರದ ವಿವಿಧ ಅಳತೆಯ 25 ನಾಟಗಳು ಪತ್ತೆಯಾಗಿರುತ್ತದೆ. ಈ ಮರದ ಬಗ್ಗೆ ಆರೋಪಿತರ ಬಳಿ ಪರವಾನಗೆಯ ಬಗ್ಗೆ ವಿಚಾರಿಸಿದಾಗ ಆರೋಪಿತರು ಯಾವುದೇ

ದಾಖಲೆಗಳು ಇಲ್ಲ ಎಂದು ಹೇಳಿರುತ್ತಾರೆ. ನಂತರ ಮಹಜರ್ ಮಾಡುವ ಸಲುವಾಗಿ ಸದರಿ ಟಿ.ಟ್ರಾವಲ್ಸ್‌ನಲ್ಲಿ ಇದ್ದ ಮರವನ್ನು ಕೂಲಿ ಕೆಲಸದಾಳುಗಳ ಸಹಾಯದಿಂದ ಕೆಳಕ್ಕೆ ಇಳಿಸಿ ಹಾಗೂ ಮಹಜರ್ ತಯಾರು ಮಾಡಿರುತ್ತೇವೆ. ಸದರಿ ನಾಟಗಳಿಗೆ 1 ರಿಂದ 25 ಎಂದು ಆಯಿಲ್-ಚಾಕ್‌ನಿಂದ ಗುರುತು ನೀಡಿರುತ್ತೇವೆ.

ನಂತರ ಠಾಣೆಗೆ ಆರೋಪಿತರು ಮತ್ತು ಮಾಲಿನೊಂದಿಗೆ ಹಿಂದಿರುಗಿ ಬಂದಿರುತ್ತೇವೆ ಹಾಗೂ ವಶಪಡಿಸಿಕೊಂಡ ಸ್ವತ್ತುಗಳನ್ನು ಠಾಣಾ ಮಾಲುಪಟ್ಟಿಯಲ್ಲಿ ನಮೂದು ಮಾಡಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಆರೋಪಿತರ ಸ್ವ-ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ನಂತರ ಮಾರನೇದಿನ ಆರೋಪಿತರು ಅವರ ಸ್ವ-ಇಚ್ಛಾ ಹೇಳಿಕೆಯಂತೆ ಕೃತ್ಯ ಸ್ಥಳವನ್ನು ತೋರಿಸಿಕೊಟ್ಟಿದ್ದು ನಾನು ಪಂಚರೊಂದಿಗೆ ಬೇಟಿ ಮಾಡಿ ಮಹಜರ್ ಕ್ರಮ ಜರುಗಿಸಿರುತ್ತೇನೆ. ಸದರಿ ಸ್ಥಳದಲ್ಲಿ ಬೀಟಿ ಮರವನ್ನು ಕೊಯ್ದಿದ್ದ ಮರದ ಹೊಟ್ಟು ಇದ್ದು ಅದನ್ನು ಅಮಾನತ್ತು ಪಡಿಸಿಕೊಂಡಿರುತ್ತೇವೆ. ಹಾಗೂ ಸದರಿ ಸ್ವತ್ತನ್ನು ಠಾಣಾ ಮಾಲುಪಟ್ಟಿಯಲ್ಲಿ ನಮೂದು ಮಾಡಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಹಾಗೂ ಅದೇದಿನ ಚಾಸಾ2 ರಿಂದ 7ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ನಂತರ ದಿಃ13.7.2015ರಂದು ಈ ಪ್ರಕರಣದ ಕೃತ್ಯ ಸ್ಥಳವು ಶ್ರೀಮಂಗಲ ಪೊ.ಠಾಣಾ ವ್ಯಾಪ್ತಿಗೆ ಸೇರಿದ್ದರಿಂದ ಸದರಿ ಪ್ರಕರಣದ ಕಡತವನ್ನು ಶ್ರೀಮಂಗಲ ಪೊ.ಠಾಣೆಗೆ ಮುಂದಿನ ತನಿಖೆಗೆ ವರ್ಗಾಯಿಸಲು ನ್ಯಾಯಾಲಯಕ್ಕೆ ಅನುಮತಿ ಪತ್ರವನ್ನು ಸಲ್ಲಿಸಿರುತ್ತೇನೆ ಹಾಗೂ ವಶಪಡಿಸಿಕೊಂಡಿದ್ದ ಸ್ವತ್ತುಗಳನ್ನು ಹೊಂದಿಕೊಳ್ಳುವಂತೆ ಅರಣ್ಯ ಇಲಾಖೆಯವರಿಗೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ. ನಂತರ ನ್ಯಾಯಾಲಯದ ಆದೇಶದಂತೆ ಪ್ರಕರಣದ ಕಡತವನ್ನು ಸ್ವತ್ತುಗಳೊಂದಿಗೆ ಶ್ರೀಮಂಗಲ ಠಾಣೆಗೆ ವರ್ಗಾಯಿಸಿರುತ್ತೇನೆ.

ಸ್ವ-ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 1ಎ ಎಂದು, ಪ್ರ ವ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿ ಪಿ 2 ಎಂದು ಸಾಕ್ಷಿಯ ಸಹಿಯನ್ನು ನಿ ಪಿ 2ಎ ಎಂದು, ಮಹಜರ್‌ನ್ನು ಈಗ ನೋಡುತ್ತಿದ್ದು ಅದನ್ನು ನಿ ಪಿ 3 ಎಂದು ಸಾಕ್ಷಿಯ ಸಹಿಯನ್ನು ನಿ ಪಿ 3ಎ ಎಂದು ಹಾಗೂ ಇನ್ನೊಂದು ಮಹಜರ್‌ನ್ನು ಈಗ ನೋಡುತ್ತಿದ್ದು ಅದನ್ನು ನಿ ಪಿ 4 ಎಂದು ಸಾಕ್ಷಿಯ ಸಹಿಯನ್ನು ನಿ ಪಿ4ಎ ಎಂದು ಗುರ್ತಿಸಲಾಯಿತು. ಹಾಗೂ 3ನೇ ಆರೋಪಿಯು ನೀಡಿದ ಸ್ವ-ಇಚ್ಛಾ ಹೇಳಿಕೆಯನ್ನು ಈಗ ನೋಡುತ್ತಿದ್ದು ಅದನ್ನು ನಿ ಪಿ 5 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 5ಎ ಎಂದು ಹಾಗೂ ಆರೋಪಿಯ ಸಹಿಯನ್ನು ನಿ ಪಿ5ಬಿ ಎಂದು ಗುರ್ತಿಸಲಾಯಿತು. ನಿ ಪಿ 5 ರಲ್ಲಿರುವ " ನನ್ನನ್ನು ಕರೆದುಕೊಂಡು ಹೋದರೆ ಬೀಟಿ ಮರದ ನಾಟಗಳನ್ನು ತುಂಬಿಸಿದ ಸ್ಥಳವನ್ನು ತೋರಿಸಿಕೊಡುತ್ತೇನೆ " ಎಂಬ ಹೇಳಿಕೆಯ ಭಾಗವನ್ನು ನಿ ಪಿ 5ಸಿ ಎಂದು ಗುರ್ತಿಸಲಾಯಿತು.

ಸಾಕ್ಷಿಯು ಈ ದಿನ ನ್ಯಾಯಾಲಯದಲ್ಲಿ 1 ರಿಂದ 3ನೇ ಆರೋಪಿತರನ್ನು ನೋಡಿ ಗುರ್ತಿಸಿರುತ್ತಾರೆ.

<u>ಪಾಟೀ ಸವಾಲು</u> :- ಶ್ರೀಮತಿ ಸಿ ಬಿ ಎ ವಕೀಲರವರಿಂದ ಃ-

ಪಾಟೀ ಸವಾಲು ಮಾಡಲು ಈ ದಿನ ಮಧ್ಯಾಹ್ನ 3 ಗಂಟೆಗೆ ಕಾಲವಕಾಶವನ್ನು ನೀಡಿ ಮುಂದೂಡಲಾಯಿತು.

ಸಹಿ/-

ಓ. ಹೇ. ಕೇ. ಸ. ಇ. ಎ. ಓ. ಜೆ.ಎಂ.ಎಫ್.ಸಿ. ನ್ಯಾಯಾಧೀಶರು, ಪೊನ್ನಂಪೇಟೆ.

ದಿನಾಂಕಃ14-2-2018ರಂದು ಮಧ್ಯಾಹ್ನ ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು ಃ- ಶ್ರೀ ಎಂ ಎಸ್ ಕೆ ಮತ್ತು ಶ್ರೀಮತಿ ಸಿ ಬಿ ಎ ವಕೀಲರು ಪಾಟೀ ಸವಾಲು ಮಾಡಲು ಕಾಲವಕಾಶವನ್ನು ಕೋರಿದ್ದು, ಯಾವುದೇ ಸಕಾರಣವನ್ನು ನೀಡದ ಕಾರಣ ಮನವಿಯನ್ನು ತಿರಸ್ಕರಿಸಲಾಯಿತು ಮತ್ತು ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಮರು ವಿಚಾರಣೆಃ ಇಲ್ಲ.

ಸಹಿ/-

ಓ. ಹೇ. ಕೇ. ಸ. ಇ. ಎ. ಒ.

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಪೊನ್ನಂಪೇಟೆ.